

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು....

ಗಾದೆಗಳು ಹಿರಿಯರ ಹಿರಿದಾದ ಜೀವನಾನುಭವದಿಂದ ಹೊರಹೊಮ್ಮಿದ್ದ ನಲ್ನುಡಿಗಳು. ಸೂತ್ರಬದ್ಧವಾದ, ಪ್ರಾಸಬದ್ಧವಾದ, ಪದಲಾಲಿತ್ಯದಿಂದ ಕೂಡಿದ, ಚಿಕ್ಕ ಹಾಗೂ ಚೊಕ್ಕವಾದ ಸೂಕ್ತಿಗಳು. ಬದುಕಿನ ಬಾನಂಗಳದಲ್ಲಿ ಸುಳಿಯುವ ಸುವಿವೇಕದ ಕೋಲ್ಮಿಂಚುಗಳು! ಜಗತ್ತಿನ ಎಲ್ಲ ಭಾಷೆಗಳಲ್ಲಿಯೂ ಗಾದೆ ಮಾತುಗಳಿದ್ದು ಅವು ಆಯಾಯ ಭಾಷೆಯ ಜನರ ಪ್ರಾಂತ-ಪ್ರದೇಶಗಳ ಮತ್ತು ಸಂಸ್ಕೃತಿಯ ಹಿನ್ನೆಲೆಯಲ್ಲಿ ಮೂಡಿಬಂದ ವಿಶಿಷ್ಟ ಅನುಭವದ ರಸಪಾಕಗಳಾಗಿರುತ್ತವೆ. ಅವುಗಳನ್ನು ಇನ್ನೊಂದು ಭಾಷೆಗೆ ತರ್ಜುಮೆ ಮಾಡುವುದು ಬಹಳ ಕಷ್ಟದ ಕೆಲಸ. ಅವುಗಳ ಭಾವಾರ್ಥವನ್ನು ಮಾತ್ರ ಬೇರೆ ಭಾಷೆಯಲ್ಲಿ ವಿವರಿಸಿ ಹೇಳಬಹುದೇ ಹೊರತು ಅವುಗಳ ಮೂಲಭಾಷೆಯಲ್ಲಿರುವ ಸೊಗಡನ್ನು ಸೆರೆಹಿಡಿಯುವುದು ಖಂಡಿತಾ ಸಾಧ್ಯವಿಲ್ಲ. ಸಂಸ್ಕೃತದಲ್ಲಿ ಕವಿ ಮಾಘನನ್ನು ಕುರಿತು ಹೇಳಿದಂತೆ ಕಾಳಿದಾಸನ ಉಪಮಾಲಂಕಾರ, ಭಾರವಿಯ ಅರ್ಥಗೌರವ, ದಂಡಿಯ ಪದಲಾಲಿತ್ಯ ಈ ಮೂರೂ ಕಾವ್ಯಗುಣಗಳು ಕನ್ನಡದ ಈ ಗಾದೆ ಮಾತುಗಳಲ್ಲಿವೆ: 'ರಾತ್ರಿ ಕಂಡ ಬಾವಿಯಲ್ಲಿ ಹಗಲು ಬಿದ್ದಂತೆ', 'ಅಕ್ಕಿ ಮೇಲೆ ಆಸೆ ನೆಂಟರ ಮೇಲೆ ಪ್ರೀತಿ', 'ಊರೆಲ್ಲಾ ಉಗಾದಿ ಮಾಡಿದರೆ ಅಡ್ನಾಡಿ ಅಮಾವಾಸ್ಯೆ ಮಾಡಿತ್ತಂತೆ', 'ಹುಚ್ಮುಂಡೇ ಮದುವೆಯಲ್ಲಿ ಉಂಡವನೇ ಜಾಣ', 'ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಎಳೆದರಂತೆ', 'ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣಸಂಕಟ', 'ಊರು ಉಪಕಾರ ಅರಿಯದು ಹೆಣ ಸಿಂಗಾರ ಅರಿಯದು', 'ದುಡ್ಡಿಲ್ಲ ಕಾಸಿಲ್ಲ ಸಂಪತ್ ಐಯ್ಯಂಗಾರ್', 'ಸಂಕಟ ಬಂದಾಗ ವೆಂಕಟರಮಣ', ಇತ್ಯಾದಿ ನೂರಾರು ಗಾದೆಮಾತುಗಳು ಜನರ ದೈನಂದಿನ ಸಂಭಾಷಣೆಯಲ್ಲಿ ಹಾಸುಹೊಕ್ಕಾಗಿರುವುದನ್ನು ಕಾಣುತ್ತೇವೆ. ಮಾತನಾಡುವಾಗ ಯಾವ ಗಾದೆಯೂ ತಕ್ಷಣ ನೆನಪಿಗೆ ಬರದೇ ಹೋದರೆ 'ಅದೇನೋ ಹೇಳ್ತಾರಲ್ಲ ಗಾದೆ, ಹಾಗಾಯ್ತು' ಎಂದು ಸಮರ್ಥನೆ ಮಾಡಿಕೊಳ್ಳುವವರನ್ನು ನೀವು ಗಮನಿಸಿರಬಹುದಲ್ಲವೇ? ಕಾಲ ಕಾಲಕ್ಕೆ ಹೊಸ ಹೊಸ ಗಾದೆ ಮಾತುಗಳು ಸೇರ್ಪಡೆಯಾಗುತ್ತಾ ಹೋಗಬಹುದು. ಸ್ವತಂತ್ರಭಾರತದ ರಾಜಕಾರಣಿಗಳ ಕೃಪಾಕಟಾಕ್ಷದಿಂದ ಹಳ್ಳಿಗಳಲ್ಲಿದ್ದ ಟೀ ಕಾಫಿ ಕ್ಲಬ್‌ಗಳು ಈಗ ಬಾರ್ ಅಂಡ್ ರೆಸ್ಟೋರೆಂಟ್‌ಗಳಾಗಿ ಪರಿವರ್ತನೆಯಾದ ಹಿನ್ನೆಲೆಯಲ್ಲಿ **'ಊರಿಗೆ ಬಂದವಳು ನೀರಿಗೆ ಬರುವುದಿಲ್ಲವೇ?'** ಎಂಬ ಗಾದೆ ಮಾತನ್ನು ಬದಲಾಯಿಸಿ **'ಊರಿಗೆ ಬಂದವನು ಬಾರಿಗೆ ಬರುವುದಿಲ್ಲವೇ?'** ಎಂಬ ಹೊಸ ಗಾದೆ ಮಾತು ಜಾರಿಗೆ ಬಂದರೆ ಆಶ್ಚರ್ಯವೇನಿಲ್ಲ. ಗಾದೆಯನ್ನು ಕುರಿತೇ ಗಾದೆ ಮಾತೊಂದಿದೆ. 'ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ' ಎಂದು ಗಾದೆಯ ಹೆಗ್ಗಳಿಕೆಯನ್ನು ಬಣ್ಣಿಸುವ ಈ ಗಾದೆ ಮಾತು ಕನ್ನಡವನ್ನು ಬಿಟ್ಟು ಬೇರೆ ಯಾವ ಭಾಷೆಯಲ್ಲಿಯೂ ಇರಲಾರದು. ಅಂತಹ ಸಾರ್ವಕಾಲಿಕ ಸತ್ಯವನ್ನೊಳಗೊಂಡ ಅಪರೂಪದ ಗಾದೆ ಮಾತುಗಳಲ್ಲಿ "ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು" ಎಂಬ ನೀತಿಯ ನುಡಿಗಟ್ಟು ಸಹ ಒಂದು. ನಾವು ಕಣ್ಣಿನಿಂದ ಕಂಡದ್ದು ಎಷ್ಟೋ ವೇಳೆ ಅಸತ್ಯವಾಗಿರಬಹುದು, ದೋಷಪೂರಿತವಾಗಿರಬಹುದು. ಆದುದರಿಂದ ಕಣ್ಣಿಗೆ ಕಂಡದ್ದನ್ನು ಆಮೂಲಾಗ್ರವಾಗಿ ತರ್ಕಿಸಿ ಅದು ನೂರಕ್ಕೆ ನೂರು ಸತ್ಯವೆಂಬುದನ್ನು ಖಚಿತಪಡಿಸಿಕೊಂಡ ನಂತರವೇ ಯಥೋಚಿತ ತೀರ್ಮಾನಕ್ಕೆ ಬರಬೇಕು ಎಂಬುದು ಈ ನುಡಿಗಟ್ಟಿನ ಅಂತರಾರ್ಥ.

ಹಾಗಾದರೆ ಕಣ್ಣಿಗೆ ಕಾಣುವುದನ್ನು ನಂಬದೇ ಇರಲು ಸಾಧ್ಯವೇ? ಕಂಡದ್ದನ್ನು ನಂಬದೆ ಕಾಣದ್ದನ್ನು ನಂಬಲು ಹೇಗೆ ಸಾಧ್ಯ? ಕಣ್ಣಿಗೆ ಕಂಡದ್ದನ್ನು ನಂಬದಿದ್ದರೆ ಅನರ್ಥವಾಗುವುದಿಲ್ಲವೆ? ರಸ್ತೆಯಲ್ಲಿ ವಾಹನವೊಂದು ಅತಿ ವೇಗವಾಗಿ ಬರುತ್ತಿದ್ದಾಗ ಅದೇ ರಸ್ತೆಯ ಕಡೆ ಒಂದು ಪುಟಾಣಿ ಮಗು ದಟ್ಟಡಿ ಇಡುತ್ತಾ ಹೋಗುವುದನ್ನು ನೋಡಿ ವಾಹನದ ವೇಗ, ಮಗುವಿನ ನಡಿಗೆ ಇವುಗಳ ಲೆಕ್ಕಾಚಾರ ಹಾಕುತ್ತಾ ಕೂರಬೇಕೆ? ಓಡಿ ಹೋಗಿ ಮಗುವನ್ನು ಹಿಂದಕ್ಕೆಳೆದು ರಕ್ಷಿಸಬೇಕಲ್ಲವೇ? ಕಣ್ಣಾರೆ ಕಂಡರೂ ಪ್ರಮಾಣಿಸಿ ನೋಡಲು, ತರ್ಕಿಸುತ್ತಾ, ವಿಚಾರ ಮಾಡುತ್ತಾ ಕಾಲಹರಣ ಮಾಡಿದರೆ ಮಗುವಿನ ಜೀವಕ್ಕೆ ಅಪಾಯ ಸಂಭವಿಸುವುದಿಲ್ಲವೇ?

ಹಾಗಾದರೆ "ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು" ಎಂಬ ನುಡಿಗಟ್ಟು ದೋಷಪೂರಿತವಾಗಿದೆಯೆ? ಎಂಬುದೀಗ ಪ್ರಶ್ನೆ. ಇನ್ನೊಂದು ಉದಾಹರಣೆಯನ್ನು ನೋಡೋಣ. ಒಮ್ಮೆ ಹುಟ್ಟುಕುರುಡನೊಬ್ಬ ರಾತ್ರಿ ಹೊತ್ತು

ಕೈಯಲ್ಲಿ ಉರಿಯುವ ಲಾಟೀನನ್ನು ಹಿಡಿದುಕೊಂಡು ದಾರಿಯಲ್ಲಿ ನಡೆದು ಹೋಗುತ್ತಿದ್ದನಂತೆ. ನೋಡಿದವರು ಗಹಗಹಿಸಿ ನಕ್ಕರು. 'ಕಣ್ಣಿಲ್ಲದ ಕುರುಡನಿಗೆ ಲಾಟೀನು ಬೇರೆ ಕೇಡು!' ಎಂದು ಲೇವಡಿ ಮಾಡುತ್ತಾ ಮುಂದೆ ಸಾಗಿದರು. ಇನ್ನು ಕೆಲವರು ಏಕಿರಬಹುದೆಂದು ವಿಸ್ಮಯಗೊಂಡು ಹತ್ತಿರ ಹೋಗಿ ಕೇಳಿದರು. ಕಣ್ಣಿಲ್ಲದ ನಿನಗೆ ಈ ಲಾಟೀನಿನಿಂದ ಏನು ಪ್ರಯೋಜನ, ದಾರಿ ಕಾಣಿಸಲು ಸಾಧ್ಯವೇ? ಎಂದು ಪ್ರಶ್ನಿಸಿದರು. ಅದಕ್ಕೆ ಆ ಕುರುಡ ನೀಡಿದ ಉತ್ತರ ಮಾರ್ಮಿಕವಾಗಿದೆ: "ಇಲ್ಲ, ನೀವು ಹೇಳುವುದು ಸರಿ. ಕಣ್ಣಿಲ್ಲದ ನನಗೆ ಇದರಿಂದ ದಾರಿ ಕಾಣಿಸುವುದಿಲ್ಲ, ನಿಜ. ಆದರೆ ಕಣ್ಣಿರುವ ವ್ಯಕ್ತಿಗಳು ಮಾತಿನ ಭರಾಟೆಯಲ್ಲಿ ನನ್ನ ಮೈಮೇಲೆ ಬೀಳದಿರಲೆಂದು ಈ ಲಾಟೀನನ್ನು ಎಚ್ಚರಿಕೆಯ ಗಂಟೆಯಾಗಿ ಕೈಯಲ್ಲಿ ಹಿಡಿದುಕೊಂಡಿದ್ದೇನೆ". ಕುರುಡನ ಈ ಉತ್ತರ ಕೇಳಿದವರ ಕಣ್ಣು ತೆರೆಸಿತು. ಕಣ್ಣಿದ್ದವರೆಲ್ಲರೂ ಸರಿಯಾಗಿ ನೋಡುತ್ತಾರೆಂದು ಹೇಳಲಾಗದು. ಕಿವಿ ಇದ್ದವರೆಲ್ಲರೂ ಸರಿಯಾಗಿ ಕೇಳಿಸಿಕೊಳ್ಳುತ್ತಾರೆಂದು ನಂಬಲಾಗದು. ಯಾವುದೋ ಗುಂಗಿನಲ್ಲಿದ್ದವರು ಕಣ್ಣಿದ್ದರೂ ಕಾಣದ ಕುರುಡರಾಗಿರುತ್ತಾರೆ; ಕಿವಿ ಇದ್ದರೂ ಕೇಳದ ಕಿವುಡರಾಗಿರುತ್ತಾರೆ. ಬಾಹ್ಯವಸ್ತುವಿನೊಂದಿಗೆ ಇಂದ್ರಿಯಗಳ ಸಂನಿಕರ್ಷವಿದ್ದರೂ ಆಂತರಿಕ ಇಂದ್ರಿಯವಾದ ಮನಸ್ಸು ಎಲ್ಲೋ ಇರುವುದರಿಂದ ವಸ್ತುವಿನ ವಾಸ್ತವ ಪರಿಜ್ಞಾನ ಉಂಟಾಗುವುದಿಲ್ಲ. ಒಂದು ಪಕ್ಷ ಇಂದ್ರಿಯಗಳ ಮೂಲಕ ಮನಸ್ಸು ಬಾಹ್ಯವಸ್ತುವನ್ನು ಗ್ರಹಿಸಿದರೂ ಆಯಾ ವ್ಯಕ್ತಿಯ ಸಂಸ್ಕಾರದ ಬಲದಿಂದಾಗಿ ವಿಭಿನ್ನರೀತಿಯಲ್ಲಿ ಗ್ರಹಿಸುವ ಸಾಧ್ಯತೆಗಳಿವೆ. ಕುಡಿತದ ಅಮಲಿನಲ್ಲಿ ಕುಡುಕನಿಗೆ ಒಂದೇ ವಸ್ತು ಎರಡಾಗಿ ಕಾಣಿಸುವಂತೆ. ಎದುರಿಗೆ ಬರುವ ಲಾರಿಯ ಎರಡು ಹೆಡ್ ಲೈಟ್‌ಗಳು ಎರಡು ಸ್ಕೂಟರ್‌ಗಳ ಲೈಟ್‌ಗಳೆಂದು ಭ್ರಮಿಸಿ ಮಧ್ಯದಲ್ಲಿ ತನ್ನ ಸ್ಕೂಟರ್ ನುಗ್ಗಿಸಲು ಯತ್ನಿಸುವ ಭ್ರಾಮಕ ಮನಃಸ್ಥಿತಿಯ ದುರ್ದೈವಿ ಸ್ಕೂಟರ್ ಸವಾರನಂತೆ. ಇಲ್ಲಿ 'ಪ್ರಮಾಣಿಸಿ ನೋಡು' ಎಂದರೆ ವಿಚಾರ ಮಾಡು, ದುಡುಕಬೇಡ ಎಂದರ್ಥ. ವಿಚಾರ ಮಾಡಬೇಕೆಂದರೆ ಉಪೇಕ್ಷೆ ಮಾಡಬೇಕೆಂದಾಗಲೀ, ವಿಳಂಬ ಮಾಡಬೇಕೆಂದಾಗಲೀ, ಗುಣಾಕಾರ ಭಾಗಾಕಾರ ಮಾಡುತ್ತಾ ತೆಪ್ಪಗೆ ಕುಳಿತುಕೋ ಎಂದಾಗಲೀ ಅಲ್ಲ. ಮಗುವು ವೇಗವಾಗಿ ಬರುವ ವಾಹನಕ್ಕೆ ಅಡ್ಡಲಾಗಿ ಹೋದಾಗ ಎಂತಹ ಅನರ್ಥ ಉಂಟಾಗಬಹುದೆಂಬ ದಿಗಿಲೇ ವಿಚಾರ. ಆ ಸಮಯದಲ್ಲಿ ವಿಳಂಬ ಮಾಡಬಾರದೆಂಬ ವಿವೇಕವೇ ಸಮಯಪ್ರಜ್ಞೆ.

ಈ ನುಡಿಗಟ್ಟಿನಲ್ಲಿ 'ಕಣ್ಣಾರೆ ಕಾಣುವುದು' ಎಂದರೆ ಕೇವಲ ಕಣ್ಣಿನಿಂದ ನೋಡಿ ಮನಸ್ಸು ಗ್ರಹಿಸುವ ಅನುಭವ ಅಲ್ಲ. ಅರಿವಿನ ಸಾಧನ ಕಣ್ಣೊಂದೇ ಅಲ್ಲ. ಮನುಷ್ಯನ ಕಿವಿ ಮೂಗು ನಾಲಗೆಗಳೂ ಈ ಕೆಲಸ ಮಾಡುತ್ತವೆ. ಈ ಇಂದ್ರಿಯಗಳು ಮನಸ್ಸಿಗೆ ರವಾನಿಸುವ ಎಲ್ಲ ಸಂವೇದನೆಗಳನ್ನು ಇಲ್ಲಿ 'ಕಣ್ಣಾರೆ ಕಾಣುವುದು' ಎಂದು ಹೇಳಲಾಗಿದೆ. ಇಂದ್ರಿಯಗಳು ಮನಸ್ಸಿನ ಅಧೀನವಾಗಿರುತ್ತವೆ. ಆದುದರಿಂದ ಮನಸ್ಸು ಕಲುಷಿತಗೊಂಡಾಗ ಇಂದ್ರಿಯಗಳು ನೀಡುವ ಸಂದೇಶ ಕರಾರುವಾಕ್ಕಾಗಿರುವುದಿಲ್ಲ. ಬರಿಗಣ್ಣಿನಿಂದ ನೋಡಿದ ನೋಟಕ್ಕೂ ಕನ್ನಡಕ ಹಾಕಿಕೊಂಡು ನೋಡುವ ನೋಟಕ್ಕೂ ವ್ಯತ್ಯಾಸವಿದೆ. ಕಣ್ಣಿಗೆ ಹಳದಿ ಕನ್ನಡಕ ಹಾಕಿಕೊಂಡರೆ ಜಗತ್ತೆಲ್ಲವೂ ಹಳದಿಯಾಗಿಯೇ ಗೋಚರಿಸುತ್ತದೆ. ಇಲ್ಲಿ ದೋಷವಿರುವುದು ಕಣ್ಣಿನಲ್ಲಿ ಅಲ್ಲ, ಅದು ಧರಿಸಿರುವ ಕನ್ನಡಕದಲ್ಲಿ. ಹಾಗೆಯೇ ಮನಸ್ಸು ಪರಿಶುದ್ಧವಾಗಿದ್ದಾಗ ಇಂದ್ರಿಯಗಳು ನೀಡುವ ಅನುಭವವೇ ಬೇರೆ, ರಾಗದ್ವೇಷಗಳಿಂದ ಕೂಡಿದಾಗ ನೀಡುವ ಅನುಭವವೇ ಬೇರೆ. ರಾಗದ್ವೇಷಗಳು ಮನಸ್ಸಿಗೆ ಹಳದಿ ಕನ್ನಡಕ ಇದ್ದ ಹಾಗೆ. ಆಗ ಇಂದ್ರಿಯಗಳ ಮೂಲಕ ನಿಷ್ಪಕ್ಷಪಾತವಾದ ವಸ್ತುನಿಷ್ಠವಾದ ಅನುಭವಗಳನ್ನು ಮನುಷ್ಯ ಪಡೆಯಲಾರ. ಆದಕಾರಣ ಮನಸ್ಸು ವಿಕ್ಷಿಪ್ತಗೊಂಡಾಗ ತೆಗೆದುಕೊಳ್ಳುವ ತೀರ್ಮಾನ ಸರಿಯಾಗಿರಲು ಸಾಧ್ಯವೇ ಇಲ್ಲ. ಕಠೋಪನಿಷತ್ ನಲ್ಲಿ ಬರುವ ಈ ಮಾತುಗಳನ್ನು ಗಮನಿಸಿ:

*ಆತ್ಮಾನಂ ರಥಿನಂ ವಿದ್ಧಿ, ಶರೀರಂ ರಥಮೇವ ಚ ।*
*ಬುದ್ಧಿಂ ತು ಸಾರಥಿಂ ವಿದ್ಧಿ, ಮನಃ ಪ್ರಗ್ರಹಮೇವ ಚ॥*

*ಇಂದ್ರಿಯಾಣಿ ಹಯಾನಾಹುಃ ವಿಷಯಾಂಸ್ತೇಷು ಗೋಚರಾನ್ ।*
*ಆತ್ಮೇಂದ್ರಿಯಮನೋಯುಕ್ತಂ ಭೋಕ್ತೇತ್ಯಾಹುರ್ ಮನೀಷಿಣಃ ॥*

ಆತ್ಮವು ರಥದ ಯಜಮಾನ, ಶರೀರವೇ ರಥ, ಬುದ್ಧಿ ಸಾರಥಿ. ಆ ಸಾರಥಿಯ ಕೈಯಲ್ಲಿರುವ ಕಡಿವಾಣವೇ ಮನಸ್ಸು. ಇಂದ್ರಿಯಗಳೇ ರಥವನ್ನು ಎಳೆಯುವ ಕುದುರೆಗಳು. ಕಾಮಕ್ರೋಧಾದಿ ವಿಷಯಗಳೇ ದಾರಿ. ಮೃತ್ಯುವಿನಿಂದ ಅಮೃತತ್ವದೆಡೆಗೆ ಅನಂತದಲ್ಲಿ ಆತ್ಮನು ಕೈಗೊಂಡ ಪ್ರಯಾಣವೇ ಮನುಷ್ಯನ ಬದುಕು. ಬುದ್ಧಿಯ ಅಧೀನದಲ್ಲಿ ಮನಸ್ಸು ಇದ್ದಾಗ ಮಾತ್ರ ದಾರಿ ಸುಗಮ. ಮನಸ್ಸಿನ ಅಧೀನದಲ್ಲಿ ಬುದ್ಧಿ ಇದ್ದರೆ ಬುದ್ಧಿ ಬುದ್ಧಿಯಾಗಿ ಉಳಿಯದೆ ದುರ್ಬುದ್ಧಿಯಾಗುತ್ತದೆ. ಬುದ್ಧಿವಂತರ ಈ ದುರ್ಬುದ್ಧಿಯೇ ಇಂದು ಜಗತ್ತಿನ ಅಶಾಂತಿಗೆ ಮೂಲ ಕಾರಣ. ಅಲ್ಲಮ ಪ್ರಭು ದೇವರು ಹೇಳುವಂತೆ

*ಕಾಲುಗಳೆರಡು ಗಾಲಿ ಕಂಡಯ್ಯ!*
*ಒಡಲೆಂಬುದು ತುಂಬಿದ ಬಂಡಿ ಕಂಡಯ್ಯ!*
*ಬಂಡಿಯ ಹೊಡೆವವರೈವರು ಮಾನಿಸರು!*
*ಒಬ್ಬರಿಗೊಬ್ಬರು ಸಮವಿಲ್ಲಯ್ಯ!*

*ಅದರಿಚ್ಛೆಯನರಿತು ಹೊಡೆಯದಿದ್ದರೆ*
*ಅದರಚ್ಚು ಮುರಿದಿತ್ತು ಗುಹೇಶ್ವರ!*

ಎತ್ತಿನ ಗಾಡಿಯನ್ನು ಒಬ್ಬ ಅನುಭವಿ ರೈತ ಹೊಡೆಯದೆ ಐದು ಜನ ಸೇರಿ ಅದೂ ಪರಸ್ಪರ ಹೊಂದಾಣಿಕೆ ಇಲ್ಲದವರು ಹೊಡೆದರೆ ಗಾಡಿಯ ಅಚ್ಚು ಮುರಿದು ಬೀಳದೆ ಇದ್ದೀತೆ? ಈ ಶರೀರವೆಂಬ ಗಾಡಿಯನ್ನು ಪಂಚೇಂದ್ರಿಯಗಳು ಅಡ್ಡಾದಿಡ್ಡಿ ಎಳೆದಾಗ ಮನುಷ್ಯನಿಗೂ ಇದೇ ದುರ್ಗತಿ ಬಂದೊದಗುತ್ತದೆ. ರಾಗದ್ವೇಷಗಳಿಗೆ ಒಳಗಾದ ವ್ಯಕ್ತಿ ದುಡುಕಿನಿಂದ ತೆಗೆದುಕೊಳ್ಳುವ ತೀರ್ಮಾನ ಹೇಗೆ ಅನರ್ಥಕಾರಿಯಾಗಬಲ್ಲದು ಎಂಬುದಕ್ಕೆ ನಾವು ಚಿಕ್ಕಂದಿನಲ್ಲಿ ಕೇಳಿದ ಕಥೆ ಹೀಗಿದೆ:

ಒಂದು ದಿನ ರಾಜನೊಬ್ಬ ತನ್ನ ರಾಣಿ ಹಾಗೂ ಭಟರೊಂದಿಗೆ ಬೇಟೆಯಾಡಲು ಕಾಡಿಗೆ ಹೋದ. ಕಾಡಿನ ಅನುಭವವಿಲ್ಲದ ರಾಣಿ ಸಂಜೆ ವೇಳೆಗೆ ಬಳಲಿ ಬೆಂಡಾದಳು. ಆಗ ರಾಜ ಅವಳನ್ನು ಮೇನೆಯಲ್ಲಿ ಅರಮನೆಗೆ ವಾಪಾಸು ಕಳುಹಿಸಿಕೊಟ್ಟ. ಬೇಟೆ ಮುಂದುವರಿಸಿದ ರಾಜ ಮಧ್ಯರಾತ್ರಿ ಅರಮನೆಗೆ ವಾಪಾಸು ಬಂದ. ಶಯ್ಯಾಗೃಹಕ್ಕೆ ಬಂದು ನೋಡುತ್ತಾನೆ. ಹಂಸತೂಲಿಕಾ ಮಂಚದ ಮೇಲೆ ರಾಣಿ ಮಲಗಿದ್ದಾಳೆ. ಅವಳ ಪಕ್ಕದಲ್ಲಿ ಪ್ರತಿದಿನ ಹಾಸಿಗೆ ಹಾಸುವ ಆಳು ಮಲಗಿದ್ದಾನೆ. ಈ ದೃಶ್ಯವನ್ನು ಕಂಡ ಮಹಾರಾಜ ನಖಶಿಖಾಂತ ಉರಿದುಬೀಳುತ್ತಾನೆ. "ಮನೆಯಾಳನ್ನೇ ಪ್ರಿಯಕರನನ್ನಾಗಿಸಿಕೊಂಡಿದ್ದಾಳೆ ಈ ಕುಲಟೆ ! ಬೇಟೆಯಲ್ಲಿ ಸುಸ್ತಾಗಿದೆಯೆಂಬ ನೆಪ ಹೇಳಿ ಅರಮನೆಗೆ ತನ್ನ ಜಾರನೊಡನೆ ಚಕ್ಕಂದವಾಡಲು ಬಂದಿದ್ದಾಳೆ. ಇವರನ್ನು ಹಾಗೆಯೇ ಬಿಡಬಾರದು, ಇಬ್ಬರ ತಲೆಯನ್ನೂ ತುಂಡರಿಸಬೇಕು" ಎಂದು ರಾಜ ತನ್ನ ಒರೆಯಲ್ಲಿದ್ದ ಕತ್ತಿಯನ್ನು ರೋಷದಿಂದ ಹಿರಿದು ಮೇಲೆತ್ತಿದಾಗ ಗೋಡೆಯ ಮೇಲೆ ತನ್ನ ಪೂರ್ವಜರು ಬರೆಸಿದ್ದ "ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು" ಎಂಬ ನೀತಿಯ ನುಡಿಗಟ್ಟು ರಾಜನಿಗೆ ಕಾಣಿಸುತ್ತದೆ. ಇವರು ಹೇಗೂ ತನ್ನ ಕೈಯಿಂದ ತಪ್ಪಿಸಿಕೊಂಡು ಹೋಗಲು ಸಾಧ್ಯವಿಲ್ಲ. ಈ ನುಡಿಗಟ್ಟನ್ನು ಒರೆಗೆ ಹಚ್ಚಿ ನೋಡಿಯೇ ಬಿಡೋಣ ಎಂದು ರಾಜ ಎತ್ತಿದ ಕೈಯನ್ನು ಕೆಳಗಿಳಿಸಿ ಬಾಗಿಲ ಮರೆಯಲ್ಲಿ ಅಡಗಿಕೊಂಡು ನಿಂತುಕೊಳ್ಳುತ್ತಾನೆ. ಕೆಲವು ನಿಮಿಷಗಳ ನಂತರ ಸೇವಕನಿಗೆ ಎಚ್ಚರವಾಗುತ್ತದೆ. ಪಕ್ಕದಲ್ಲಿ ಮಲಗಿದ್ದ ರಾಣಿಯನ್ನು ನೋಡಿದವನೇ ಹಾವನ್ನು ತುಳಿದವನಂತೆ ಹೌಹಾರಿ ಮಂಚದಿಂದ ಕೆಳಗೆ ಜಿಗಿದು ತಲೆಬಾಗಿ ನಿಲ್ಲುತ್ತಾನೆ. ಆ ಶಬ್ದಕ್ಕೆ ರಾಣಿಗೂ ಎಚ್ಚರವಾಗುತ್ತದೆ. ಸೇವಕ ರಾಣಿಯ ಎರಡೂ ಕಾಲುಗಳನ್ನು ಹಿಡಿದು ಗಳಗಳನೆ ಕಣ್ಣೀರುಗರೆಯುತ್ತಾನೆ. ರಾಣಿಗೆ ಏನೂ ತೋಚದೆ ದಿಗ್ಭ್ರಾಂತಳಾಗುತ್ತಾಳೆ. ವಾಸ್ತವವಾಗಿ ನಡೆದದ್ದೇನು? ಅನೇಕ ವರ್ಷಗಳಿಂದ ರಾಜ ರಾಣಿಯರಿಗೆ ಆ ಹಂಸತೂಲಿಕಾ ಮಂಚದ ಹಾಸಿಗೆ ಸಿದ್ಧಪಡಿಸುತ್ತಿದ್ದ ಸೇವಕನಿಗೆ ಆ ದಿನ ಒಂದು ವಿಚಿತ್ರವಾದ ಆಸೆಯುಂಟಾಯಿತು. ಪ್ರತಿ ದಿನ ಹಾಸಿಗೆಯನ್ನು ಸಿದ್ಧಮಾಡುತ್ತೇನೆಯೇ ಹೊರತು ಇದರ ಮೇಲೆ ಮಲಗಿದರೆ ಎಂಥ ಸುಖವಿರುತ್ತದೆ ಎಂದು ಒಂದು ದಿನವೂ ನೋಡಿಲ್ಲ. ಹೇಗೂ ಈ ದಿನ ರಾಜ ರಾಣಿ ಇಬ್ಬರೂ ಇಲ್ಲ, ಒಂದು ಗಳಿಗೆ ಮಲಗಿ ನೋಡೋಣವೆಂದು ಅವನು ಮೈತುಂಬಾ ಹೊದ್ದುಕೊಂಡು ಮಲಗಿದ. ಮಲಗಿದ್ದೇ ತಡ ಸುಖ ನಿದ್ದೆ ಅವನನ್ನು ಆವರಿಸಿತ್ತು. ಕಾಡಿನಿಂದ ವಾಪಾಸು ಬಂದ ರಾಣಿ ಸ್ನಾನ, ಊಟ ಮುಗಿಸಿ ಶಯ್ಯಾಗೃಹಕ್ಕೆ ವಿಶ್ರಾಂತಿ ಪಡೆಯಲು ಬಂದಳು. ಮಂಚದ ಮೇಲೆ ಮಲಗಿರುವವನು ರಾಜನೇ ಎಂದು ಭಾವಿಸಿದಳು. ಅಲ್ಲಿಗೆ ಇನ್ನಾರು ತಾನೆ ಬರಲು ಸಾಧ್ಯ? ತನಗಿಂತಲೂ ಮೊದಲು ಬಂದು ರಾಜ ಮಲಗಿದ್ದಾನೆ. ಬಹಳ ದಣಿದಿದ್ದಾನೆ. ಅವನನ್ನು ಮಾತಾಡಿಸುವುದು ಬೇಡ ಎಂದು ತಾನೂ ಅವನ ಪಕ್ಕದಲ್ಲಿ ಮಲಗಿಬಿಟ್ಟಳು. ಎಚ್ಚರವಾದಾಗ ವಿಷಯ ತಿಳಿದು ಅವಾಕ್ಕಾದಳು. ಸೇವಕನ ಅನನ್ಯ ಸ್ವಾಮಿನಿಷ್ಠೆ ವಿಧೇಯತೆಯ ಪರಿಚಯವಿದ್ದ ರಾಣಿ "ಅಯ್ಯಾ ದೇವರು ದೊಡ್ಡವನು, ನಾವಿಬ್ಬರೂ ಒಂದೇ ಮಂಚದಲ್ಲಿ ಮಲಗಿರುವುದನ್ನು ಮಹಾರಾಜರು ನೋಡಿದ್ದರೆ ಇಬ್ಬರ ಪ್ರಾಣವೂ ಉಳಿಯುತ್ತಿರಲಿಲ್ಲ. ಇದರಲ್ಲಿ ನಿನ್ನ ತಪ್ಪೇನೂ ಇಲ್ಲ" ಎಂದು ಅವನನ್ನು ಸಂತೈಸಿ ಬೀಳ್ಕೊಟ್ಟಳು. ಬದುಕಿದೆಯಾ ಬಡಜೀವವೇ ಎಂದು ಹೊರಹೋಗಲು ಬಾಗಿಲಿಗೆ ಬಂದ ಬಡಪಾಯಿ ಸೇವಕನಿಗೆ ಬಾಗಿಲ ಮರೆಯಲ್ಲಿ ಅಡಗಿ ನಿಂತಿದ್ದ ರಾಜ ಕಾಣಿಸಿಕೊಂಡ. ಬೆಟ್ಟದ ತುದಿಯಿಂದ ಬಂಡೆ ತನ್ನ ತಲೆಯ ಮೇಲೆ ಬಿದ್ದಂತಾಯಿತು. ಪ್ರಪಾತಕ್ಕೆ ಉರುಳುವಂತೆ ರಾಜನ ಕಾಲ ಮೇಲೆ ಸೇವಕ ಧೊಪ್ಪೆಂದು ಬಿದ್ದ. ರಾಣಿಯೂ ಓಡೋಡಿ ಬಂದು ನಡುಗುತ್ತಾ ನಿಂತಳು. ಇಬ್ಬರ ಮಾತುಗಳನ್ನು ಕಿವಿಗೊಟ್ಟು ಆಲಿಸಿದ್ದ ರಾಜನ ಕಣ್ಣುಗಳಲ್ಲಿ ಅಶ್ರುಧಾರೆ ಹರಿಯುತ್ತಿತ್ತು! ಹಿರಿದ ಕತ್ತಿಯಿಂದ ತನ್ನನ್ನೇ ಇರಿದುಕೊಳ್ಳುವಂತಾಗಿತ್ತು. ರಾಜ ನೆಟ್ಟ ದೃಷ್ಟಿಯಿಂದ ಚಿಂತಿಸುತ್ತಿದ್ದ. ತಾನು ದುಡುಕಿ ಅವರ ತಲೆ ಕತ್ತರಿಸಿದ್ದರೆ.... ತನ್ನ ಪಾಶವೀಕೃತ್ಯದಿಂದ ಎರಡು ಮುಗ್ಧಜೀವಗಳು ರಕ್ತದ ಮಡುವಿನಲ್ಲಿ ಬಿದ್ದು ಹೊರಳಾಡುತ್ತಿದ್ದ ಭೀಕರ ಕಲ್ಪನಾಚಿತ್ರ ಮೂಡಿಬಂತು! ಅವನ ಕಣ್‌ರೆಪ್ಪೆ ಬಡಿಯದಾಯಿತು. ಮುಖ ಪೇಲವವಾಗಿತ್ತು. ಮಹಾರಾಜ ಆವೇಶದಲ್ಲಿ ಹಿರಿದ ಕತ್ತಿಯೊಂದಿಗೆ ಮಿಸುಕಾಡದೆ ಗೋಡೆಗೆ ಒರಗಿ ನಿಂತಿದ್ದ ಬೆದರುಗೊಂಬೆಯಂತಾಗಿದ್ದ! ಇಂತಹ ಪ್ರಸಂಗಗಳನ್ನು ಕಂಡೇ ಅಲ್ಲವೇ ಗಾದೆ ಮಾತು ಬಂದಿದ್ದು: "ತಾಳಿದವನು ಬಾಳಿಯಾನು!"

ವಿಚಾರವಂತ ಓದುಗರೇ! ನಿತ್ಯ ಜೀವನದ ಘಟನಾವಳಿಗಳಿಂದ ನಿಮ್ಮ ಮನಸ್ಸು ಉದ್ವೇಗಕ್ಕೆ ಒಳಗಾದಾಗ ದುಡುಕದಿರಿ. 'ಸಿಟ್ಟಿನಲ್ಲಿ ಕೊಯ್ದ ಮೂಗು ಮತ್ತೆ ಅಂಟಿಸಿಕೊಳ್ಳಲು ಬರುವುದಿಲ್ಲ'. ಕೆಟ್ಟ ಮನಸ್ಸಿನ ಕೆಟ್ಟ ವಿಚಾರಗಳ ಕೆಟ್ಟ ಹಸಿವನ್ನು ತಣಿಸದಿರಿ. ದುಡುಕಿ ಪ್ರತಿಕ್ರಿಯಿಸದೆ ಮೌನ ಧರಿಸಿ ಧ್ಯಾನಮಗ್ನರಾಗಿರಿ. ಕೆಟ್ಟ ಮನಸ್ಸನ್ನು ಕೆಟ್ಟ

ಆಲೋಚನೆಗಳ ಸುಳಿವಿಲ್ಲದಂತೆ ಉಪವಾಸ ಕೆಡವಿರಿ. ಸಮಾಧಾನವಾಗಿ ಕುಳಿತು ಆಲೋಚಿಸಿ. ಮನಸ್ಸಿಗೆ ಮುಸುಕಿದ ರಾಗದ್ವೇಷಗಳ, ಕೋಪತಾಪಗಳ ಪರದೆಯನ್ನು ಸರಿಸಿ. ಆಗ ನಿಮಗೆ ಸತ್ಯದ ನೈಜದರ್ಶನವಾಗುತ್ತದೆ!

10.3.2008

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑